## 1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಕೆಆರ್ ನಗರ.

## ಸಿ.ಸಿ ನಂಃ 1060/2017

| | | |
|---|---|---|
| ಸಾಕ್ಷಿಯ ಹೆಸರುಃ | ಆನಂದ ಕೆ.ಎಸ್ | ಫ್ರಾಸಾಃ 04 |
| ತಂದೆಯ ಹೆಸರುಃ | ಕೆಂಪಯ್ಯ | ಚಾಸಾಃ 05 |
| ವಯಸ್ಸುಃ | 42 ವರ್ಷ | ದಿಃ 02.02.2026 |
| ಉದ್ಯೋಗಃ | ಪೋಲಿಸ್ ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಜಲಪುರಿ ಮೈಸೂರು. | |

### ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು ದಿನಾಂಕಃ 04.07.2014 ರಿಂದ ದಿನಾಂಕಃ 16.09.2019 ರ ವರೆಗೆ ಪೋಲೀಸ್ ಪೇದೆಯಾಗಿ ಸಾಲಿಗ್ರಾಮ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 01.10.2016 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಮದ್ಯಾಹ್ನ 03.30 ಗಂಟೆಗೆ ಚಾಸಾ.12 ರವರು ನನ್ನನ್ನು ಮತ್ತು ಚಾಸಾ.4 ರವರನ್ನು ಕರೆದು ನಮ್ಮ ಠಾಣಾ ಮೊಕದ್ದಮೆ ಸಂಖ್ಯೆಃ 117/2016 ರ ಸಂಬಂಧ ಚಾಸಾ.1 ರವರು ಹಳೆ ಮಿರ್ಲೆ ಗ್ರಾಮದ ಸಮೀಪ ಅಕ್ರಮ ವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಯನ್ನು ಬೈಕ್ ಮತ್ತು ಮದ್ಯದ ಸಮೇತ ಹಿಡಿದು ಕೊಂಡಿದ್ದು, ಸ್ಥಳಕ್ಕೆ ಹೋಗಿ ಪರಿಶೀಲಿಸಲು ನನ್ನನ್ನು ಮತ್ತು ಚಾಸಾ.4 ರವರನ್ನು ನಮ್ಮ ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಹಳೆ ಮಿರ್ಲೆ ಗ್ರಾಮದ ಸಮೀಪ ಚಾಸಾ.1 ರವರು ಕೆ.ಎ-45-ಯು-7845 ಬಜಾಜ್ ಡಿಸ್ಕವರ್ ದ್ವಿಚಕ್ರ ವಾಹನ ಮತ್ತು 6 ಮದ್ಯದ ಬಾಕ್ಸ್ ಗಳನ್ನು ಹಾಗೂ ಆರೋಪಿಯಾದ ಹರೀಶ್ ರವರನ್ನು ತಮ್ಮ ಬಳಿ ನಿಲ್ಲಿಸಿದ್ದರು. ನಂತರ ಚಾಸಾ.12 ರವರು ದ್ವಿಚಕ್ರ ವಾಹನ ಮತ್ತು ಮದ್ಯದ ಬಾಕ್ಸ್ ಗಳನ್ನು ಪರಿಶೀಲಿಸಿ, ಆರೋಪಿ ಯಾದ ಹರೀಶ ಬಿನ್ ಶಿವಣ್ಣೇಗೌಡ, ಮೂಡಲ ಬೀಡು, ಸಾಲಿಗ್ರಾಮ ಮತ್ತು ದ್ವಿಚಕ್ರ ವಾಹನ ಮತ್ತು ಮದ್ಯದ ಬಾಕ್ಸ್ ಗಳ ಸಮೇತ ಠಾಣೆಗೆ ಬಂದಿರುತ್ತಾರೆ. ಚಾಸಾ.2 ಮತ್ತು 3 ರವರನ್ನು ಚಾಸಾ.12 ರವರು ಬರ ಮಾಡಿಕೊಂಡು ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿದ್ದು, ಜಪ್ತಿ ಪಡಿಸಿಕೊಂಡಿದ್ದ 6 ಬಾಕ್ಸ್ ಗಳ ಪೈಕಿ ತಲಾ ಒಂದು ಬಾಕ್ಸ್ ನಲ್ಲಿ 90 ಎಂ.ಎಲ್ ನ ಒರಿಜಿನಲ್ ಡಿಲಕ್ಸ್ ವಿಸ್ಕಿಯ 96 ಪ್ಯಾಕೆಟ್ ಗಳಂತೆ 5 ಬಾಕ್ಸ್ ಗಳಲ್ಲಿ 90 ಎಂ.ಎಲ್ ನ ಒರಿಜಿನಲ್ ಡಿಲಕ್ಸ್ ವಿಸ್ಕಿಯ ಒಟ್ಟು 480 ಪ್ಯಾಕೆಟ್ ಗಳು ಇದ್ದವು. ಇನ್ನೊಂದು

ಬಾಕ್ಸ್ ನಲ್ಲಿ 180 ಎಂ.ಎಲ್ ನ ಒಲ್ಡ್ ಟೆವರೀನ್ ವಿಸ್ಕಿಯ 39 ಪ್ಯಾಕೆಟ್ ಗಳು ಇದ್ದವು. ಮಹಜರ್ ನಲ್ಲಿ ಜಪ್ತಿ ಪಡಿಸಿಕೊಂಡ ಮಧ್ಯಗಳ ಬಾಕ್ಸ್ ನಂಬರ್ ಮತ್ತು ಸೀರಿಯಲ್ ನಂಬರ್ ಗಳನ್ನು ನಮೂದಿಸಲಾಗಿರುತ್ತದೆ. ನಂತರ ರಾಸಾಯನಿಕ ಪರೀಕ್ಷೆಗಾಗಿ ಪ್ರತಿ ಬಾಕ್ಸ್ ನಿಂದ ತಲಾ 5 ಪ್ಯಾಕೆಟ್ ಮಧ್ಯಗಳನ್ನು ಮಾದರಿಯಾಗಿ ಪಡೆಯಲಾಗಿರುತ್ತದೆ. ನಂತರ ಮಾದರಿಯಾಗಿ ಪಡೆದ ಮಧ್ಯಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿರುತ್ತೇವೆ. ನಂತರ ಉಳಿದ ಮಧ್ಯಗಳನ್ನು ಆಯಾ ಬಾಕ್ಸ್ ಗಳ ಸಮೇತ ಬಿಳಿ ಬಟ್ಟೆಯಲ್ಲಿ ಸುತ್ತಿ ಎನ್ ಎಂಬ ಅಕ್ಷರದಿಂದ ಅರಗು ಸೀಲ್ ಮಾಡಿ ಅಮಾನತ್ತು ಮಾಡಲಾಗಿರುತ್ತದೆ. ನಂತರ ಚಾಸಾ.12 ರವರು ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸಿ, ಪ್ರ.ವ.ವ ಅನ್ನು ತಯಾರಿಸಿರುತ್ತಾರೆ. ನಿಪಿ.1ರ ಮಹಜರ್ ಅನ್ನು ಚಾಸಾ.12 ರವರ ಉಕ್ತ ಲೇಖನದಂತೆ ನಾನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತೇನೆ.

ನ್ಯಾಯಾಲಯದಲ್ಲಿರುವ ಮುದ್ದೆ ಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯು ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಮ್ಮ ಅರ್ಜಿಯಲ್ಲಿ ನಮೂದಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಟಿ.ಜಿ ವಕೀಲರಿಂದಃ</u>**

1. ದಿನಾಂಕಃ 01.10.2016 ರಂದೇ ನಿಪಿ.1ರ ಮಹಜರ್ ಅನ್ನು ತಯಾರಿಸಿರುತ್ತೇವೆ. ನಿಪಿ.1ರ ಮಹಜರ್ ಅನ್ನು ದಿನಾಂಕಃ 01.10.2016 ರಂದು ತಯಾರಿಸಿದ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ನನ್ನ ಸಮಕ್ಷಮದಲ್ಲಿ ಸ್ಥಳ ಮಹಜರ್ ಅನ್ನು ಮಾಡಿರುವುದಿಲ್ಲ. ನಾವು ಘಟನಾ ದಿನದಂದು ಘಟನಾ ಸ್ಥಳಕ್ಕೆ ಹೋಗಿದ್ದರೇ ಘಟನಾ ಸ್ಥಳದ ಮಹಜರ್ ಅನ್ನು ಮಾಡುತ್ತಿದ್ದೆವು ಹಾಗೂ ನಾವು ಘಟನಾ ಸ್ಥಳಕ್ಕೆ ಹೋಗಿರದ ಕಾರಣ ಸದರಿ ದಿನದಂದು ಘಟನಾ ಸ್ಥಳದ ಮಹಜರ್ ಅನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2. ನಿಪಿ.1ರ ಮಹಜರ್ ಅನ್ನು ನಾನು ಬೆರಳಚ್ಚು ಮಾಡಿರುತ್ತೇನೆಂದು ನಿಪಿ.1ರಲ್ಲಿ ನನ್ನ ಸಹಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ.1ರಲ್ಲಿ 6 ಬಾಕ್ಸ್ ಗಳು ಮತ್ತು 2 ಚೀಲಗಳನ್ನು ಅಮಾನತ್ತು ಪಡಿಸಿದ್ದ ಬಗ್ಗೆ ನಮೂದು ಆಗಿದ್ದು, ಸದರಿ ಬಾಕ್ಸ್

ಮತ್ತು ಚೀಲಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಬದಲಾಗಿ ಅವುಗಳನ್ನು ಮದ್ಯಗಳ ಸಮೇತ ಅಬಕಾರಿ ಇಲಾಖೆಗೆ ಹಸ್ತಾಂತರಿಸಿರುತ್ತೇವೆ.

3. ಅಮಾನತ್ತು ಪಡಿಸಿಕೊಂಡ ಮುದ್ದೆ ಮಾಲುಗಳ ಮೇಲೆ ಕೇವಲ ಪಂಚರು ಮತ್ತು ಚಾಸಾ.12 ರವರು ಮಾತ್ರ ಸಹಿ ಮಾಡಿದ್ದು, ಅದಕ್ಕೆ ನನ್ನ ಸಹಿ ಯನ್ನು ಪಡೆದಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಮುದ್ದೆ ಮಾಲನ್ನು ಅಮಾನತ್ತು ಪಡಿಸಿಕೊಳ್ಳದ ಕಾರಣ ಯಾವುದೇ ಮುದ್ದೆ ಮಾಲುಗಳ ಮೇಲೆ ನನ್ನ ಸಹಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಮದ್ಯಗಳ ಕ್ರಮ ಸಂಖ್ಯೆಗಳನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿಯ ಮೇಲಿನ ವೈಷಮ್ಯದಿಂದ ಚಾಸಾ.1 ರವರು ಹೂಡಿರುವ ಈ ಸುಳ್ಳು ಪ್ರಕರಣಕ್ಕೆ ಪೂರಕ ವಾಗುವಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುದಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಘಟನೆ ನೆಡೆದಿದ್ದರೆ ಘಟನಾ ಸ್ಥಳದಲ್ಲಿಯೇ ನಾವು ಅಮಾನತ್ತು ಮಹಜರ್ ಅನ್ನು ಜರುಗಿಸುತ್ತಿದ್ದೆವು ಹಾಗೂ ನಾನು ಹೇಳಿದ ಹಾಗೇ ಯಾವುದೇ ಘಟನೆ ನೆಡೆಯದಿದ್ದ ಕಾರಣ ಘಟನಾ ಸ್ಥಳದಲ್ಲಿ ನಾವು ಅಮಾನತ್ತು ಮಹಜರ್ ಅನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೇರೆಯವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಒಂದನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**